ಶ್ರೀ ಡಿ. ಬಿ ಚಂದ್ರೇಗೌಡ.—ನಮ್ಮಲ್ಲಿ ಒಟ್ಟಾರೆ ಅಭಿಪ್ರಾಯ ಇದೆ. ಮೊದಲೇ ಕೂತು ಚರ್ಚೆ ಮಾಡಿ ಆಮೇಲೆ ಕಾರ್ಯಕ್ರಮವನ್ನು ತೆಗೆದುಕೊಳ್ಳೋಣ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ಒಂದೇ ಒಂದು ಸಲಹೆ. ಇದಕ್ಕೆ ಉತ್ತರ ಏನೂ ಬೇಕಾಗಿಲ್ಲಾರದು. ಮಾನ್ಯ ಜಾಲಪ್ಪನವರು ರೀ–ಫೈನಾನ್ಸ್ ವಿಚಾರದಲ್ಲಿ ಹೇಳುತ್ತಾ ಸಧ್ಯಕ್ಕೆ ನಮ್ಮಲ್ಲಿ ಹಣ ಏನು ಇದೆ, ಡಿ.ಸಿ.ಸಿ. ಬ್ಯಾಂಕ್ ಏಂತ್ತು ಆಪೆಕ್ಸ್ ಬ್ಯಾಂಕ್‌ಗಳಲ್ಲಿರತಕ್ಕಂಥ ಡೆಪಾಸಿಟ್ ಏನಿದೆ ಇದನ್ನೆ ರೆಫರ್ ಮಾಡಿ ಹೇಳಿದ್ದಾರೆಂದು ನನ್ನ ಭಾವನೆ. ಈ ಆರೂವರೆ ಕೋಟಿ ರೂಪಾಯಿಗಳ ಬಗ್ಗೆ ಹೆಳಿರತಕ್ಕದ್ದು ನಿಜ. ಈಗಾಗಲೇ ಈ ವಿಚಾರದ ಬಗ್ಗೆ ಚರ್ಚೆಗೆ ಹೋಗುವುದು ಬೇಡ. ದಯವಿಟ್ಟು ಅದನ್ನು ವಿಚಾರ ಮಾಡಿ. ಏಕೆಂದರೆ, ಈಗಾಗಲೇ ಅದನ್ನು ಉಪಯೋಗ ಮಾಡಿ ಷಾರ್ಟ್‌ಟರ್ಮ್ ಲೋನ್‌ಗೆ ರೀ–ಫೈನಾನ್ಸ್ ಮಾಡುವುದಕ್ಕೆ ವಿಚಾರ ಮಾಡುತ್ತೇವೆ ಎಂದು ಹೇಳಿದರೆ ನಾಳೆ ಮುಂದಿನ ಡಿಸ್ಕಷನ್‌ಗೆ ಪೆಟ್ಟಾದೀತು ಎನ್ನುವುದು ನನ್ನ ಭಾವನೆ. ಈ ವಿಚಾರವನ್ನು ಮುತ್ತೆ ಪ್ರೈವೇಟ್ ಆಗಿ ಇಟ್ಟುಕೊಳ್ಳಿ. ನಾನು ಏನು ಸಲಹೆ ಮಾಡುತ್ತೇನೆಂದರೆ, ಮತ್ತು ಮಾನ್ಯ ಜಾಲಪ್ಪನವರಿಗೆ ಹೇಳುವುದೇನೆಂದರೆ. ಇದನ್ನು ಈ ಸದನದಲ್ಲಿ ಚರ್ಚೆ ಮಾಡುವುದು ಬೇಡ. ನೀವು ಪ್ರತ್ಯೇಕವಾಗಿ ಅದನ್ನು ಖಾಸಗಿಯಾಗಿ ಚರ್ಚೆ ಮಾಡತಕ್ಕಂಥ ಸಂದರ್ಭ ಬರುತ್ತದೆ, ಆಗ ಅಲ್ಲಿ ಅದನ್ನು ಇಡಿ. ಈಗ ಸದನದಲ್ಲಿ ಇದನ್ನು ಚರ್ಚೆ ಮಾಡುವುದು ಬೇಡ. ನಾನು ಪತ್ರಿಕೆಗಳೆಗೆಲ್ಲಾ ಹೋಗುತ್ತದೆ, ಹೊರಗಡೆಯವರಿಗೆ ಹೋಗುತ್ತದೆ ಎಂದು ನನ್ನ ಅಭಿಪ್ರಾಯ.

ಶ್ರೀ ಆರ್.ಎಲ್. ಜಾಲಪ್ಪ.—ತೊಂದರೆ ಏನೂ ಇಲ್ಲ. ಈಗ ನಮಗೆ ೨೬೦ ಕೋಟಿ ರೂಪಾಯಿ ಕೊಟ್ಟಿಗಬೇಕು. ೨೬೦ ಕೋಟಿ ರೂಪಾಯಿ ನಬಾರ್ಡ್‌ನಿಂದ ಡ್ರಾ ಮಾಡಿಲ್ಲ, ಡಿಸ್ಟ್ರಿಕ್ಟ್ ಬ್ಯಾಂಕ್ ಆಗಲೀ ಸುಮಾರು ೧೨೦ ಕೋಟಿ ರೂಪಾಯಿ ಆಪೆಕ್ಸ್ ಬ್ಯಾಂಕ್‌ನಿಂದ ತಂದಂಥ ಹಣವನ್ನು ಷಾರ್ಟ್ ಟರ್ಮ್‌ನಲ್ಲಿ ತೊಡಗಿಸಿದ್ದಾರೆ, ಆದರೆ ಅಲ್ಲಿ ತೊಂದರೆ ಏನೂ ಆಗುವುದಿಲ್ಲ. ಫೈನಾನ್ಸ್ ಮಾಡಿ we can claim reimbursement afterwards. ಇಪೆಲ್ಲಾ ಸೆಟ್ಲ್ ಆದರೆ...

ಶ್ರೀ ಎಸ್. ಬಂಗಾರಪ್ಪ.—ನನ್ನ ಅಭಿಪ್ರಾಯವನ್ನು ಜಾಲಪ್ಪನವರು ಗಮನಿಸಬಹುದು. ಉದಾಹರಣೆಗೆ ಹೇಳಬೇಕೆಂದರೆ, ಯಾವ ಉದ್ದೇಶಕ್ಕಾಗಿ ನಾವುಗಳು ಹೋಗುತ್ತಿದ್ದೇವೆ, Supposing on all party delegation is taken to Delhi, what will happen? ನಬಾರ್ಡ್ ನವರ ಹತ್ತಿರ ನೀವು ಮಾತನಾಡುತ್ತೀರಿ, ಯಾವ ಉದ್ದೇಶಕ್ಕಾಗಿ ಅಲ್ಲಿ ಮಾತನಾಡುತ್ತೀರಿ. ರೀ–ಫೈನಾನ್ಸ್ ಮಾಡುವುದಕ್ಕೋಸ್ಕರ.Suppose they hold the view that you have already utilising Rs.6 and add croret for the samething,let us see ಎಂದು ಹೇಳಿಬಿಟ್ಟರೆ ಏನು ಮಾಡುತ್ತೀರಿ ಎನ್ನತಕ್ಕಂಥಾದ್ದು ನನ್ನ ಅಭಿಪ್ರಾಯ. ನಾನು ಅದಕ್ಕೋಸ್ಕರ ಹೇಳಿದ್ದೇನೆ.

SRI R. V. DESHPANDE.—There is a problem. ನಾರ್ಡ್ ಕೆನರಾದವರು ಬ್ಯಾಂಕಿನಿಂದ ರೀ–ಫೈನಾನ್ಸನ್ನು ತೆಗೆದುಕೊಳ್ಳುತ್ತಿಲ್ಲ. ಪ್ರಾಬ್ಲಮ್ ಏನಾಗಿದೆ ಎಂದರೆ ಡೆಪಾಸಿಟ್ ಮೇಲೆ ಹೆಚ್ಚು ರೇಟ್ ಆಫ್ ಇಂಟರೆಸ್ಟನ್ನು ಕೊಡುತ್ತಿದ್ದಾರೆ. ಕ್ರಾಪ್‌ವೈಸ್ ಮೇಲೆ ಕಡಿಮೆ ಈ ರೀತಿ ಪ್ರಾಬ್ಲಮ್ ಆಗಿದೆ. ಹೀಗಾಗಿ ಮಾನ್ಯ ಜಾಲಪ್ಪನವರು ಕೊಟ್ಟಿರುವ ಸಲಹೆ ಒಳ್ಳೆಯದು ಇದ್ದರೂ naturally when you get the refinancing at the cheap rate, they have used the deposit. ಡೆಪಾಸಿಟ್ ಮೇಲೆ ಹೆಚ್ಚುರೇಟನ್ನು ಕೊಟ್ಟು, ರಿ–ಫೈನಾನ್ಸ್ ಅಗ್ರಿಕಲ್ಚರ್‌ನಲ್ಲಿ ರೇಟು ಕಡಿಮೆಯಾಗುತ್ತಿದೆ.

೨) ತೀರ್ಥಹಳ್ಳಿ ಮತ್ತು ಶಿವಮೊಗ್ಗ ತಾಲ್ಲೂಕುಗಳಲ್ಲಿ ಹೆಚ್ಚುತ್ತಿರುವ ಕ್ಯಾಸನೂರು ಅರಣ್ಯ ಖಾಯಿಲೆ ಬಗ್ಗೆ

ಶ್ರೀ ಡಿ. ಬಿ. ಚಂದ್ರೇಗೌಡ.—ಮಾನ್ಯ ಅಧ್ಯಕ್ಷರೇ, ತೀರ್ಥಹಳ್ಳಿ ಮತ್ತು ಸುತ್ತಮುತ್ತ ಶಿವಮೊಗ್ಗ ಜಿಲ್ಲೆಯ ತಾಲ್ಲೂಕುಗಳಲ್ಲಿ ಈಗ ಹೆಚ್ಚುತ್ತಾ ಇರುವ್ಯತ್ತಿರತಕ್ಕಂಥ ಕ್ಯಾಸನೂರ ಅರಣ್ಯಖಾಯಿಲೆಯ ಬಗ್ಗೆ ನಾನು ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ.

ಮಾನ್ಯ ಸದಸ್ಯರಾದ ಜಿ. ರಾಜಂಗೌಡ ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.)

ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಚಿವರು).—ಮಾನ್ಯ ಅಧ್ಯಕ್ಷರೆ, ಕ್ಯಾಸನೂರು ಅರಣ್ಯ ಖಾಯಿಲೆಯಂ ವೈರಸ್ಸುಗಳಿಂದ ಹರಡುವ

ಖಾಯಿಲೆಯಾಗಿದ್ದು ಪ್ರತಿ ವರ್ಷವೂ ಶಿವಮೊಗ್ಗ, ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಕಾಣಿಸಿಕೊಳ್ಳುತ್ತದೆ. ಈ ವೈರಸ್ಸುಗಳ ಮೂಲ ಸ್ಥಾನವು ಕಾಡು ಪ್ರಾಣಿಗಳಾಗಿದೆ. ಈ ವೈರಸ್ಸುಗಳು ಪ್ರಾಣಿಗಳಿಂದ ಪ್ರಾಣಿಗಳಿಗೆ ಉಣ್ಣೆಗಳ ಕಡಿತದಿಂದ ಹರಡುತ್ತದೆ. ಸಂಚರಿಸುವಾಗ ಮಂಗಗಳ, ಮನುಷ್ಯ ಮತ್ತು ಇತರ ಪ್ರಾಣಿಗಳಿಗೆ ಈ ಉಣ್ಣೆಯಂ ಕಡಿತದಿಂದ ರೋಗದ ಸೋಂಕು ತಗಲುತ್ತದೆ. ಈ ವೈರಸ್ಸುಗಳ ಸೋಂಕುವಿಕೆಯ ನಂತರ ಮಂಗಗಳು ಮತ್ತು ಮನುಷ್ಯರಲ್ಲಿ ಈ ಖಾಯಿಲೆಯ ಲಕ್ಷಣಗಳು ಬೆಳೆಯುತ್ತದೆ.

ಈಗ ಈ ಖಾಯಿಲೆ ವಿರುದ್ಧ ಪರಿಣಾಮಕಾರಿ ಔಷಧಿಗಳು ಇರುವುದಿಲ್ಲ. ರೋಗ ಲಕ್ಷಣಗಳಿಗೆ ಮಾತ್ರ ಚಿಕಿತ್ಸೆ ಮಾಡಲಾಗುತ್ತದೆ. ದಿನಾಂಕ ೨೪-೧೧-೧೯೮೯ ರಿಂದ ೧೨-೩-೧೯೯೦ರವರೆಗೆ ತೀರ್ಥಹಳ್ಳಿ ಮತ್ತು ಹೊಸನಗರ ತಾಲ್ಲೂಕುಗಳಲ್ಲಿ ೯೦೦ ರೋಗಿಗಳು ಚಿಕಿತ್ಸೆಯನ್ನು ಪಡೆದಿರುತ್ತಾರೆ ಮತ್ತು ಅವರಲ್ಲಿ ೩೫೧ ರೋಗಿಗಳಲ್ಲಿ ರೋಗ ಇದೆಯೆಂದು ಖಚಿತವಾಗಿದೆ. ಒಟ್ಟಾಗಿ ಶಿವಮೊಗ್ಗ ಜಿಲ್ಲೆಯಲ್ಲಿ ದಿನಾಂಕ ೨೪-೧೧-೧೯೮೯ ರಿಂದ ೧೨-೩-೧೯೯೦ರವರೆಗೆ ೬ ಮರಣಗಳು ಈ ಖಾಯಿಲೆಯಿಂದ ವರದಿಯಾಗಿದೆ.

ನಿಯಂತ್ರಣ ಕ್ರಮಗಳು

ಆರೋಗ್ಯ ಇಲಾಖೆಯು ಈ ಪ್ರದೇಶಗಳಲ್ಲಿನ ಮನೆ ಮನೆಯ ಭೇಟಿಯನ್ನು ಪ್ರತಿ ದಿನವೂ ತೀವ್ರಗೊಳಿಸುತ್ತಿದೆ. ರೋಗಿಗಳನ್ನು ಗುರುತು ಹಚ್ಚುವ ಹಾಗು ತಕ್ಷಣದ ಚಿಕಿತ್ಸೆಗಾಗಿ ಹತ್ತಿರದ ಆಸ್ಪತ್ರೆಗಳಿಗೆ ಕಳುಹಿಸಲು ವಿಪರ್ಪಾಡು ಮಾಡಲಾಗುತ್ತಿದೆ. ಮಂಗಗಳ ಸಾವು ವರದಿಯಾಗಿರುವ ಪ್ರದೇಶಗಳಲ್ಲಿ ಬಿ.ಹೆಚ್.ಸಿ. ಕೀಟ ನಾಶಕಗಳನ್ನು ಸಿಂಪಡಿಸಲಾಗುತ್ತಿದೆ. ಈ ಕ್ರಮದಿಂದ ತಗುಲಿದ ಸೋಂಕು ಉಣ್ಣೆಗಳ ಸಂಖ್ಯೆಯನ್ನು ಕನಿಷ್ಟ ಮಟ್ಟಕ್ಕೆ ಇಳಿಸಿ ರೋಗದ ಹರಡುವಿಕೆಯನ್ನು ಕನಿಷ್ಟ ಮಟ್ಟಕ್ಕೆ ತಗ್ಗಿಸಲಾಗಿದೆ. ದುರ್ಗಮವಾದ ಪ್ರದೇಶಗಳಲ್ಲಿ ರೋಗಿಗಳ ಚಿಕಿತ್ಸೆಯನ್ನು ಅವರ ಮನೆಯ ಬಾಗಿಲಲ್ಲೇ ನಡೆಸಲಾಗುತ್ತಿದೆ. ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಕೈಮರ ಮತ್ತು ತೆಂಗಿನಕೊಪ್ಪ ಗ್ರಾಮಗಳಲ್ಲಿ ಎರಡು ತಾತ್ಕಾಲಿಕ ಆಸ್ಪತ್ರೆಗಳನ್ನು ಸ್ಥಾಪಿಸಲಾಗಿದೆ. ಅನುಭವಿ ವೈದ್ಯರ ಸೇವೆಯನ್ನು ಒದಗಿಸಲಾಗಿದೆ. ತೀವ್ರವಾಗಿ ಖಾಯಿಲೆಗೆ ಗುರಿಯಾದ ರೋಗಿಗಳನ್ನು ತೀರ್ಥಹಳ್ಳಿಯ ಜೆ ಸಿ ಜನರಲ್ ಆಸ್ಪತ್ರೆಗೆ ಸಾಗಿಸುವ ಏರ್ಪಾಡುಗಳನ್ನು ಮಾಡಲಾಗಿದೆ. ಈ ಉದ್ದೇಶಕ್ಕಾಗಿ ಎರಡು ಪ್ರತ್ಯೇಕ ವಾಹನಗಳ ವ್ಯವಸ್ಥೆಯನ್ನು ಸಹ ಮಾಡಲಾಗಿದೆ. ತೀರ್ಥಹಳ್ಳಿಯ ಜೆ.ಸಿ. ಆಸ್ಪತ್ರೆಯಲ್ಲಿ ಒಂದು ಪ್ರತ್ಯೇಕ ತುರ್ತು ಚಿಕಿತ್ಸಾ ವಿಭಾಗ ಮತ್ತು ಒಂದು ಪ್ರತ್ಯೇಕ ವಾರ್ಡನ್ನು ಸಹ ಕಲ್ಪಿಸಲಾಗಿದೆ. ಪರಿಣಾಮಕಾರಿ ನಿವಾರಕ ಕ್ರಮಗಳನ್ನು ಕೈಗೊಳ್ಳುವ ಇತರ ಆಸ್ಪತ್ರೆಗಳ ವೈದ್ಯರು ಮತ್ತು ಶುಶ್ರೂಷಕರನ್ನು ಕರೆ ತರಲಾಗಿದೆ. ಚಿಕಿತ್ಸೆಗಾಗಿ ೨೫,೦೦೦-೦೦ ರೂಪಾಯಿಗಳ ಬೆಲೆಯ ಔಷಧಿಗಳನ್ನು ಸರ್ಕಾರಿ ಔಷಧ ಮಳಿಗೆಯಿಂದ ಸರಬರಾಜು ಮಾಡಲಾಗಿದೆ. ಇವರ ಜೊತೆಗೆ ರೂ. ೪೭,೦೦೦.೦೦ಗಳ ಔಷಧಿಗಳನ್ನು ಉಪ ನಿರ್ದೇಶಕರು, ವೈರಸ್ ಡಯಾಗನಿಸ್ಟಿಕ್ ಲ್ಯಾಬರೋಟರಿ, ಶಿವಮೊಗ್ಗ, ಇಲ್ಲಿಗೆ ಸರಬರಾಜು ಮಾಡಲಾಗಿದೆ. ಹಾಗೂ ಒಂದು ಸಾವಿರ ಬಾಟಲ್ ಗ್ಲೂಕೋಸ್ ಸಲೈನನ್ನು ಸಹ ಇಲಾಖೆಯಿಂದ ಸರಬರಾಜು ಮಾಡಲಾಗಿದೆ. ಔಷಧಿಗಳನ್ನು ಕೊಳ್ಳಲು ಶಿವಮೊಗ್ಗ ಜಿಲ್ಲಾ ಪರಿಷತ್ತಿನ ಮುಖ್ಯ ಕಾರ್ಯದರ್ಶಿ, ಶಿವಮೊಗ್ಗ ಜಿಲ್ಲೆಯ ಆರೋಗ್ಯ ಅಧಿಕಾರಿಗಳಿಗೆ ಸಂಪೂರ್ಣ ಅಧಿಕಾರವನ್ನು ಕೊಟ್ಟಿರುತ್ತಾರೆ. ಶಿವಮೊಗ್ಗ ಜಿಲ್ಲೆಯಲ್ಲಿ ಉಣ್ಣೆಗಳ ಸಂಖ್ಯೆಯನ್ನು ಕಡಿಮೆ ಮಾಡಲು ಕೀಟ ನಾಶಕಗಳನ್ನು ಪ್ರಾಣಿಗಳ ಮೇಲೆ ಪ್ರಯೋಗಿಸಲು ಸರಬರಾಜು ಮಾಡಲಾಗಿದೆ. ಪದೇ ಪದೇ ಅರಣ್ಯ ಪ್ರದೇಶಗಳಿಗೆ ಭೇಟಿ ನೀಡುವ ಜನರ ಉಪಯೋಗಕ್ಕಾಗಿ ಉಣ್ಣೆಗಳನ್ನು ದೂರವಿಡುವ (ಮೈಲಾನ್) ಸಾಕಷ್ಟು ಪ್ರಮಾಣದಲ್ಲಿ ಸರಬರಾಜು ಮಾಡಲಾಗಿದೆ.

ಈ ಭಾಗದಿಗೆ ಒಳಗಾದ ಪ್ರದೇಶಗಳಲ್ಲಿ ನಾನು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ನಿರ್ದೇಶಕರು, ಸಹ ನಿರ್ದೇಶಕರು, ಮತ್ತು ಆ ಪ್ರದೇಶದ ಶಾಸಕರುಗಳೊಂದಿಗೆ ಭೇಟಿ ನೀಡಿ ನಿವಾರಣೋಪಾಯಗಳನ್ನು ವೀಕ್ಷಿಸಿರುತ್ತೇನೆ. ಪುಣೆಯ ನ್ಯಾಷನಲ್ ಇನ್ಸ್‌ಟಿಟ್ಯೂಟ್ ಆಫ್ ವೈರಾಲಜಿಯ ವಿಜ್ಞಾನಿಗಳು ಹಾಗೂ ಶಿವಮೊಗ್ಗದ ವೈರಸ್ ಡಯಾಗನಿಸ್ಟಿಕ್ ಲ್ಯಾಬರೋಟರಿಯ ಅಧಿಕಾರಿಗಳು ಈ ರೋಗಕ್ಕೆ ಲಸಿಕೆಯನ್ನು ತಯಾರಿಸುತ್ತಿದ್ದಾರೆ. ಈ ಲಸಿಕೆಯ ಶಕ್ತಿ ಮತ್ತು ಸುರಕ್ಷತೆಯನ್ನು ಖಚಿತಪಡಿಸಿಕೊಂಡ ನಂತರ ಈ ಲಸಿಕೆಯನ್ನು ದೊಡ್ಡ ಪ್ರಮಾಣದಲ್ಲಿ ಮನುಷ್ಯರ ಮೇಲೆ ಉಪಯೋಗಿಸಬಹುದಾಗಿದೆ. ಈಗ ಈ ಲಸಿಕೆಗಳು ಇನ್ನು ಪ್ರಯೋಗದ ಹಂತದಲ್ಲಿರುವುದರಿಂದ ಅದನ್ನು ತಕ್ಷಣಕ್ಕೆ ಉಪಯೋಗಿಸಲು ಸಾಧ್ಯವಾಗುವುದಿಲ್ಲ.

೧೯೧೨ ಪಿ.ಎಂ.

† ಶ್ರೀ ಡಿ. ಬಿ. ಚಂದ್ರೇಗೌಡ.— ಮಾನ್ಯ ಸಭಾಧ್ಯಕ್ಷರೇ, ಈ ಖಾಯಿಲೆ ೧೯೫೬ನೇ ಇಸವಿಯಿಂದ ಮಲೆನಾಡಿನ ಪ್ರದೇಶದಲ್ಲಿ ಪ್ರಾರಂಭ ಆಗಿದೆ. ಮೊದಲು ಪ್ರಾರಂಭ ಆಗಿದ್ದು ಸೊರಬ ತಾಲ್ಲೂಕಿನ ಕೆಲವು ಹಳ್ಳಿಗಳಲ್ಲಿ. ಪ್ರತಿವರ್ಷ ಬೇಸಿಗೆಯಲ್ಲಿ ಈ ಖಾಯಿಲೆ ಕಾಣಿಸುತ್ತಿತ್ತು. ಆದರೆ ಈ ಸಾರಿ ವಿಶೇಷವಾಗಿ ಚಳಗಾಲದಲ್ಲಿ ಪ್ರಾರಂಭ ಆಗಿದೆ. ತಾವು ಕೊಟ್ಟಿರತಕ್ಕ ಮಾಹಿತಿಗಳಲ್ಲಿ ಸ್ವಲ್ಪ ದೋಷ ಇದೆ. ಆ ದೋಷ ತಮ್ಮದಲ್ಲ. ಅದಕ್ಕೆ ಕಾರಣ ಇದೆ, ಅದು ಬರುವುದಕ್ಕಿಂತ ಮುಂಚಿನೇ ನಾನು ಈ ಸದನದ ಸದಸ್ಯನಾಗಿ ಪ್ರಮಾಣ ವಚನ ಸ್ವೀಕರಿಸುವುದಕ್ಕೆ ಮುಂಚೆ ಮಲೆನಾಡಿನಲ್ಲಿ ಈ ಖಾಯಿಲೆ ಇರುವ ಬಗ್ಗೆ ಹೇಳಿದ್ದೆ. ಮಾನ್ಯ ಮುಖ್ಯ ಮಂತ್ರಿಗಳಿಗೆ, ಆರೋಗ್ಯ ಮಂತ್ರಿಗಳಿಗೆ ನಾನು ಅಭಿವಂದಿಸಿದ್ದೇನೆ. ತತ್‌ಕ್ಷಣ ಕೆಲವು ಮಾಹಿತಿಗಳನ್ನು ಸಂಗ್ರಹಿಸಿರುವುದರ ಜೊತೆಗೆ ದಿನಾಂಕ ೧೫-೧೨-೬೦ ರಂದು ಅವರೇ ನನ್ನ ಜೊತೆ ಬಂದಿದ್ದರು. ಅವರು ನನ್ನ ಜೊತೆ ಪ್ರವಾಸ ಮಾಡಿದ್ದಾರೆ. ದುರ್ದೈವದ ಸಂಗತಿ ಏನು ಅಂದರೆ, ಸುಮಾರು ೫೫ ಜನ ಹಳ್ಳಿಗಳಿಗಿಂತಲೂ ಜಾಸ್ತಿ ಈ ಖಾಯಿಲೆ ವ್ಯಾಪಿಸಿದೆ. ಇನ್ನು ಒಂದು ಕಡೆಯಿಂದ ಗುಣ ಪಡಿಸಿದರೆ ಮತ್ತೊಂದು ಕಡೆಯಿಂದ ಹಬ್ಬುತ್ತಿದೆ. ನನಗೆ ಬಂದಿರುವ ಮಾಹಿತಿ ಪ್ರಕಾರ, ಸುಮಾರು ೨೨ ಜನ ತೀರ್ಥಹಳ್ಳಿಯಲ್ಲಿ ತೀರಿಕೊಂಡಿದ್ದಾರೆ, ಶಿವಮೊಗ್ಗದಲ್ಲಿ ಒಬ್ಬರು, ಒಟ್ಟು ೨೩ ಜನ ಈ ಖಾಯಿಲೆಯಿಂದ ಸತ್ತು ಹೋಗಿದ್ದಾರೆ. ಮೊದಲು ಸೊರಬದಲ್ಲಿ ಮಾತ್ರ ಈ ಖಾಯಿಲೆ ಪ್ರಾರಂಭವಾಗಿದ್ದು ಈಗ ಬೇರೆ ಕಡೆಗೂ ಹಬ್ಬುತ್ತಾ ಬಂದಿದೆ. ಈಗ ತೀರ್ಥಹಳ್ಳಿಯ ಇನ್ನೂ ಒಂದು ಭಾಗದಲ್ಲಿ ವೈರಸ್ ಬಹಳ ವಿಪರೀತವಾಗಿ ಸ್ಪ್ರೆಡ್ ಆಗುತ್ತಿದೆ. ೨೨ ಜನ ಸತ್ತಿದ್ದರೂ ಸಹ ತಮಗೆ ೬ ಜನ ಸತ್ತಿರುವರೆಂದು ವರದಿ ಬಂದಿದೆ. ರಕ್ತ ತಪಾಸಣೆಗಾಗಿ ಶಿವಮೊಗ್ಗಕ್ಕೆ ಹೋಗುತ್ತದೆ, ರಕ್ತ ತಪಾಸಣೆಗಾಗಿ ಶಿವಮೊಗ್ಗಕ್ಕೆ ಹೋದ ನಂತರ ವರದಿ ಬರುವುದಕ್ಕೆ ೧೫ ದಿವಸ ಅಥವಾ ೨೦ ದಿವಸ ಹಿಡಿಯುತ್ತಿತ್ತು. ರಕ್ತ ತಪಾಸಣೆಯೊಳಗೆ ಪೂರ್ಣವಾಗಿ ಅದು ಕೆ.ಎಫ್.ಡಿ. ಎಂದು ತೀರ್ಮಾನ ಬರುವವರೆಗೆ ಅವರು ಕೆ.ಎಫ್.ಡಿ. ಯಿಂದ ಸತ್ತರು ಎನ್ನತಕ್ಕ ವರದಿಯನ್ನು ಕೊಡುವುದಿಲ್ಲ. ಆ ಕಾರಣ ಸಾವಿನ ಸಂಖ್ಯೆ ೨೩ ಆಗಿದ್ದರೂ ಸಹ ತಮ್ಮ ಲೆಕ್ಕಾಚಾರದಲ್ಲಿ ಬರೀ ೬ ಜನ ಸತ್ತಿದ್ದಾರೆಂದು ಇದೆ. ಉಳಿದ ಕಡೆ ಅಂದರೆ ಹೊಸನಗರದಲ್ಲಿ ೪೧ ಜನರಿಗೆ ಸಪ್ಪೆಕ್ಟೆಡ್ ಫೀವರ್ ಬಂದಿದೆ ಎಂದು ಹೇಳುತ್ತೇನೆ. ಶಿವಮೊಗ್ಗ ಜಿಲ್ಲೆಯಲ್ಲಿ ೧೪ ಜನರಿಗೆ ಇದರ ಸೋಂಕು ತಗುಲಿದೆ ಎಂದು ಅಧಿಕಾರಿಗಳು ತಿಳಿಸುತ್ತಾರೆ. ನಾನು ಈಗ ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ. ನಿಮ್ಮ ಲೆಕ್ಕದಲ್ಲಿ ೯೦ ಜನರು ದಾಟಿದೆ, ತಪಾಸಣೆ ಮಾಡಿರುವವರ ಪೈಕಿ ೩೫ ಹೆಚ್ಚು ಜನರಿಗೆ ಈ ಕಾಯಿಲೆ ಸೋಂಕು ತಗುಲಿದೆ. ೧೯೫೬ನೇ ಇಸವಿಯಿಂದ ೩೪ ವರ್ಷಗಳ ಕಾಲ ಈ ಖಾಯಿಲೆಯನ್ನು ಇದುವರೆಗೆ ತಡೆಗಟ್ಟಲಿಕ್ಕೆ ಸಾಧ್ಯವಾಗದೇ ಹೋಯಿತು. ಇದನ್ನು ಗುಣಪಡಿಸಲಾಗದು. ಈ ಖಾಯಿಲೆ ಬಂದರೆ ಮನುಷ್ಯ ಹೆಚ್ಚು ಕಡಿಮೆ ಅತ್ಯಂತ ಕಷ್ಟವಾದಂತಹ ತೊಂದರೆಯನ್ನು ಅನುಭವಿಸುತ್ತಾನೆ. ಇದರಿಂದ It takes away the vitals of the body. ಸತ್ವವನ್ನು ಸತ್ತು ಹೋಗಿ ಬಿಡುತ್ತಾನೆ. ಬದುಕಿರುವವನು ಸಾಯುತ್ತಾನೆ. ಈ ಕಾರಣದಿಂದ ಈ ಖಾಯಿಲೆಯನ್ನು ತಡೆಗಟ್ಟುವುದಕ್ಕಾಗಿ ನಾನು ಅನೇಕ ಸಾರಿ ತಮ್ಮನ್ನು ಪ್ರಾರ್ಥಿಸಿಕೊಂಡಿದ್ದೇನೆ, ವೈದ್ಯರುಗಳನ್ನು ಹಾಕಿ ಎಂದು ಹೇಳಿದ್ದೇನೆ. ೮ ಜನ ವೈದ್ಯರನ್ನು ಹಾಕಿದಿರಿ. ೪ ಜನ ವೈದ್ಯರು ಹೋಗಿದ್ದಾರೆ, ಇನ್ನೊಬ್ಬರು ತೀರಿಕೊಂಡಿದ್ದಾರೆ ಎಂಬ ಸುದ್ದಿ ಬಂದಿದೆ, ಅವರು ಯಾರು ಎಂದು ಗೊತ್ತಿಲ್ಲ. ಉಳಿದ ನಾಲ್ಕು ಜನ ವೈದ್ಯರು ಹೋಗಿಲ್ಲ. ಇಂತಹ ಕಷ್ಟಕಾಲದಲ್ಲಿ ಕೂಡ ಇವರು ಹೋಗಲಿಲ್ಲ. ನಾಲ್ಕನೆಯವರು ಒಬ್ಬರು ತೀರಿಕೊಂಡಿದ್ದಾರೆಂಬ ಸುದ್ದಿ ಬಂದಿದೆ. ಅದನ್ನು ವೆರಿಫೈ ಮಾಡಿಸಿ. ಹೀಗೆ ಒಂದು ದೊಡ್ಡ ಪ್ರಮಾಣದಲ್ಲಿ ಸೋಂಕು ಇದೆ. ಮಲೆನಾಡಿನ ಪ್ರದೇಶದಲ್ಲಿ ಈ ಸೋಂಕು ಹೆಚ್ಚುತ್ತಾ ಇರುವುದರಿಂದ ಅಲ್ಲಿನ ಜನರಲ್ಲಿ ಒಂದು ರೀತಿಯಾದ ಗಾಬರಿಯನ್ನುಂಟು ಮಾಡಿದೆ. ಏನಪ್ಪ ಈ ಪ್ರದೇಶದಲ್ಲಿ ಬದುಕುವುದು ಕಷ್ಟವೇನೋ ಎಂದು ಅನಿಸಿದೆ. ನೀವು ಅಲ್ಲಿ ಸ್ಪೇ ಮಾಡುತ್ತೇವೆಂದು ಹೇಳಿದಿರಿ. ಇದು ಏನಾಗುತ್ತದೆ ಅಂದರೆ, ಒಣಗಿರತಕ್ಕಂಥ ಎಲೆಗಳ ಕೆಳಗೆ ಈ ಚಿಗಣಗಳು ಸೇರಿರುತ್ತವೆ. ನೀವು ಮೇಲ್ಗಡೆ ಸ್ಪ್ರೇ ಮಾಡುವುದರಿಂದ ಅವು ಸಾಯುವುದಿಲ್ಲ. ಈ ಬಗ್ಗೆ ಒಂದೆರಡು ಸಲಹೆಗಳಿವೆ. ತಾವು ದಯಮಾಡಿ ಫಾರೆಸ್ಟ್ ಮಂತ್ರಿಗಳ ಜೊತೆ, ಇಲಾಖೆಯ ಮಂತ್ರಿಗಳ ಜೊತೆಗೆ ಚರ್ಚೆ ಮಾಡಿ. ಹಿಂದೆ ಒಂದು ಕಾಲದಲ್ಲಿ ಮಲೆನಾಡಿನಲ್ಲಿ ಅಕ್ಟೋಬರ್, ನವೆಂಬರ್ ತಿಂಗಳಲ್ಲಿ ಸೀಮಿತವಾಗಿ ಅರಣ್ಯವನ್ನು ಸುಡುತ್ತಾ ಇದ್ದರು. ಅರಣ್ಯವನ್ನು ಸುಡತಕ್ಕಂಥ ಒಂದು ಕಾರ್ಯವನ್ನು ಸುರಕ್ಷತೆಯಿಂದ ಮಾಡುತ್ತ ಇದ್ದರು. ಈಗ ಅರಣ್ಯಕ್ಕೆ ಬೆಂಕಿ ತಗುಲಿಸುವುದು ಮಹಾಪಾಪವೇನೋ ಎಂಬಂತಾಗಿದೆ. ಈಗ ಜನ ಸಾಯುವುದಕ್ಕೆ ಪ್ರಾರಂಭವಾಗಿದೆ. ಆದ್ದರಿಂದ ಹಿಂದೆ ಇದ್ದಂತೆ ಅರಣ್ಯವನ್ನು ಸೀಮಿತವಾಗಿ ಸುಡತಕ್ಕಂಥ ಒಂದು ಆಲೋಚನೆಯ ಬಗ್ಗೆ ತಾವು ಪರಿಶೀಲನೆ ಮಾಡಿ. ಸಾಧ್ಯವಾದಷ್ಟು ಬೇಗ ತತ್‌ಕ್ಷಣ ಅಲ್ಲಿಗೆ

ವೈದ್ಯರುಗಳನ್ನು ನೇಮಕಮಾಡಿ. ವೈದ್ಯರು ಹೋಗದೆ ಇದ್ದರೆ ಹೋಗತಕ್ಕವರು ಯಾರಾದರೂ ಇದ್ದರೆ ದಯಮಾಡಿ ಪೇಪರಿನಲ್ಲಿ ಒಂದು ಅಡ್ವರ್ಟೈಸ್‌ಮೆಂಟ್ ಕೊಟ್ಟುಬಿಡಿ ನಾನು ಅನೇಕ ಜನರನ್ನು ಕೇಳಿದ್ದೇನೆ. ಮಲೆನಾಡಿಗೆ ಹೋಗುವುದು ಕಷ್ಟ. ಅವರು ತೆಂಗಿನಕೊಪ್ಪದ ವಿಚಾರ ಪ್ರಸ್ತಾಪ ಮಾಡಿದರು, ನಿಜವಾಗಿ ನಮ್ಮ ಡಾಕ್ಟರ್ ಒಳ್ಳೆಯ ಕೆಲಸ ಮಾಡಿದ್ದಾರೆ, ಹ್ಯೂಮನ್ ಸರ್ವೀಸ್ ಅದು. ೪೦೦-೫೦೦ ಜನರಿಗೆ ತೆಂಗಿನಕೊಪ್ಪದಿಂದ ಆಸ್ಪತ್ರೆಯನ್ನು ಶಿಫ್ಟ್ ಮಾಡಿದ್ದೇವೆ. ಮತ್ತೆ ಮೂರನೇ ಬಾರಿ, ನಾಲ್ಕನೇ ಬಾರಿಗೂ ಮುಖ್ಯ ಮಂತ್ರಿಗಳನ್ನು ನಾನು ನೋಡಿದಾಗ ಅವರು ಆದೇಶ ಕೊಟ್ಟರು. ಯಾರು ಈ ಖಾಯಿಲೆಯಿಂದ ಸತ್ತಿದ್ದಾರೆ ಅವರಿಗೆ ಮುಖ್ಯ ಮಂತ್ರಿಗಳ ಪರಿಹಾರನಿಧಿಯಿಂದ ಪರಿಹಾರವನ್ನು ಕೊಡಲಿಕ್ಕೆ ಆದೇಶ ಕೊಟ್ಟರು, ಇದುವರೆಗೆ ಅದು ಹೋಗಿಲ್ಲ. ಆದ್ದರಿಂದ ದಯಮಾಡಿ ಮುಖ್ಯ ಮಂತ್ರಿಗಳ ಪರಿಹಾರ ನಿಧಿಯಿಂದ ಪರಿಹಾರವನ್ನು ಕೊಡಬೇಕೆಂದು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಅಲ್ಲಿ ಸಾಯುವವರು ಯಾರೆಂದರೆ ತೀರ ಬಡವರು. ನಮ್ಮಲ್ಲಿ ಗೊಬ್ಬರಕ್ಕೆ ಕಂದಿಗೆ ಎಂದು ಹಾಡುತ್ತಾರೆ, ಅದಕ್ಕೆ ದರಗು ಎಂದು ಹೇಳುತ್ತೇವೆ ಒಣಗಿರತಕ್ಕಂಥ ಸೊಪ್ಪನ್ನು ತರುತ್ತಾರೆ. ಸೊಪ್ಪು ಒಣಗಿದ ಮೇಲೆ ಅದನ್ನು ದರಗು ಎಂದು ಕರೆಯುತ್ತೇವೆ. ಅದನ್ನು ಕೂಡಿಸಿಕೊಂಡು ಬರುವುದಕ್ಕೆ ಹೆಣ್ಣುಮಕ್ಕಳು ಹೋಗುತ್ತಾರೆ. ಸಾದೆ ತರುವುದಕ್ಕೆ ಎಲ್ಲರೂ ಹೋಗುತ್ತಾರೆ. ಹೀಗೆ ದರಗವನ್ನು ತಂದಾಗ ಅದರ ಜೊತೆಗೆ ಈ ಉಣ್ಣೆ ಬರುತ್ತದೆ. ಅದನ್ನು ಹಟ್ಟಿಯಲ್ಲಿ, ದನದ ಕೊಟ್ಟಿಗೆಯಲ್ಲಿ ಹಾಕಿದಾಗ ಪಕ್ಕಳು ಮುರಿಗೆಲ್ಲಾ ತಗಲುತ್ತದೆ ಹೀಗಾಗಿ ಆಫ್ ಕೋರ್ಸ್, ಪ್ರಿವೆನ್‌ಷನ್ ಈಸ್ ಬೆಟರ್ ದ್ಯಾನ್ ಕ್ಯೂರ್, ಬಟ್ ಪ್ರಿವೆಷನ್ ಈಸ್ ಇಂಪಾಸಿಬಲ್. ಇದು ಒಂದು ವೈಜ್ಞಾನಿಕ ಜಗತ್ತಿಗೆ ಸವಾಲಾಗಿ ನಿಂತಿದೆ. ಕಳೆದ ೩೫ ವರ್ಷಗಳಿಂದ ಇದಕ್ಕೆ ಪರಿಹಾರ ಸಿಕ್ಕಿಲ್ಲ. ಆದ್ದರಿಂದ ದಯವಿಟ್ಟು ಮಾನವೀಯ ಅನುಕಂಪದ ದೃಷ್ಟಿಯಿಂದ ಮತ್ತು ವಿಪರೀತವಾಗಿ ಹಬ್ಬುತ್ತಾ ಇರತಕ್ಕಂಥ ಈ ಸೋಂಕನ್ನು ತಡೆಗಟ್ಟಲು ತಮ್ಮ ಜವಾಬ್ದಾರಿ ದೃಷ್ಟಿಯಿಂದ ಸಾಧ್ಯವಾದಷ್ಟು ೨-೩ ದಿವಸಗಳಲ್ಲಿ ವೈದ್ಯರುಗಳ ಪುದ್ದೆಗಳನ್ನು ಭರ್ತಿಮಾಡಿ. ಇಂತಹ ಒಂದು ಸುದಭ್ರದಲ್ಲೂ ಕೂಡ ಹೋಗದೇ ಇರತಕ್ಕಂಥ ವೈದ್ಯರುಗಳಿದ್ದರೆ ಅವರನ್ನು ಇಲಾಖೆಯಿಂದ ವಜಾಮಾಡಿ. ನನಗೆ ಅವರ ಆಗತ್ಯವಿಲ್ಲ. ಎರಡನೆಯದು, ಮುಖ್ಯ ಮಂತ್ರಿಗಳ ಪರಿಹಾರ ನಿಧಿಯಿಂದ ಅವರಿಗೆ ಏನಾದರೂ ಒಂದು ಪರಿಹಾರವನ್ನು ಕೊಡತಕ್ಕಂಥಾದ್ದು ಮುಖ್ಯ ಮತ್ತೆ ಕೇಂದ್ರದ ಸಂಶೋಧನಾ ಮಂಡಲಿ ಏನಾದರೂ ಬರುವುದಕ್ಕೆ ಸಾಧ್ಯವಿದ್ದರೆ ಸಂಶೋಧನಾ ಮಂಡಲಿಗೆ ಕಾಗದ ಬರೆದು, ಅವರಾದರೂ ಬಂದು ನೋಡಲಿ ನಾವು ಕೊಡತಕ್ಕಂಥ ಪರಿಹಾರ ಸಾಕಾಗದೆ ಇರಬಹುದು. ಅದುದರಿಂದ ತಾವು ದಯವಿಟ್ಟು ಇದನ್ನು ಮಾಡಬೇಕು. ಜಿಲ್ಲಾ ಪರಿಷತ್ತು, ಆರೋಗ್ಯ ಇಲಾಖೆ ಮತ್ತು ಈ ಸರ್ಕಾರ ಈ ಮೂರರ ಸಂಯೋಜನೆ ಮಾಡಿ ಔಷಧಿ ಒದಗಿಸುವುದು, ಉಪಕರಣಗಳನ್ನು ಒದಗಿಸುವದು ಇತ್ಯಾದಿ ಕಾರ್ಯಕ್ರಮಗಳನ್ನು ತಾವು ತುರ್ತಾಗಿ ಹಮ್ಮಿಕೊಳ್ಳಬೇಕು. ಮತ್ತೆ ತಾವು ಬಂದಾಗಲೂ ಕೂಡ ನಾನು ಹೇಳಿದ್ದೇನೆ. ತೀರ್ಥಹಳ್ಳಿ, ಸೊರಬದಿಂದ ಹಿಡಿದು ಬಹುಶಃ ಚಿಕ್ಕಮಗಳೂರಿನವರೆಗೆ ಎಲ್ಲೂ ಮೇಜರ್ ಆಸ್ಪತ್ರೆ ಇಲ್ಲ. ಆದ್ದರಿಂದ ಇಲ್ಲಿಗೆ ನೂರಾರು ಜನ ನಮ್ಮುತ್ತಾ ಇದ್ದಾರೆ. ಆದಕ್ಕಾಗಿ ಕೆ.ಎಫ್.ಡಿ.ಗೆ ಸ್ಪೆಷಲ್ ವಾರ್ಡುಗಳನ್ನು ಕಟ್ಟುವುದಕ್ಕೆ ಹೇಳಿ. ಒಂದು ವಾರದಲ್ಲಿ ಕಟ್ಟಿಸುವುದಕ್ಕಾದರೂ ವ್ಯವಸ್ಥೆ ಮಾಡಿ. ಅಲ್ಲಿ ಸಾಕಷ್ಟು ಹಾಸಿಗೆ ಮತ್ತು ಸೌಕರ್ಯಗಳನ್ನು ಒದಗಿಸುವುದಕ್ಕೆ ತಾವು ಪ್ರಯತ್ನಮಾಡಬೇಕು. ಮತ್ತೆ ಬ್ಲಡ್ ಟ್ರಾನ್ಸ್‌ಫ್ಯೂಷನ್ ಬಗ್ಗೆ ಹೇಳುವಾಗ, ಪಾಸಿಟೀವ್ ಬಂದಿಲ್ಲ ಎನ್ನುವ ಕಾರಣಕ್ಕಾಗಿ ಇನ್ನೂ ಯಾವ ಕೇಸುಗಳು ಉಳಿವೆ ಆ ಕೇಸುಗಳು ಎಷ್ಟು ಎಂದು ನಾನು ಮಾಹಿತಿ ತರಿಸಿದ್ದೇನೆ. ನನಗೆ ಅವರು ಹೇಳಿದ್ದಾರೆ. ೬೭೦ ಜನರಿಗೆ ಪಾಸಿಟೀವ್ ಬಂದಿದೆ. ಹೊಸನಗರದಲ್ಲಿ ೧೧೦ ಜನರಿಗೆ ಬಂದಿದೆ, ಶಿವಮೊಗ್ಗದಲ್ಲಿ ೭ ಜನರಿಗೆ ಬಂದಿವೆ. ಇವತ್ತು ಬೆಳಿಗ್ಗೆ ಈ ಮಾಹಿತಿಯನ್ನು ಅಧಿಕಾರಿಗಳಿಂದ ತರಿಸಿರತಕ್ಕಂಥಾದ್ದು. ಈಗಿರತಕ್ಕಂಥ ಪರಿಸ್ಥಿತಿಯ ಅರಿವನ್ನು ತಮಗೆ ಕೊಟ್ಟಿದ್ದೇನೆ. ಬಂಗಾರಪ್ಪನವರೆ, ಇದು ತಮ್ಮ ಕೊಡುಗೆ. ತಮ್ಮ ಕೊಡುಗೆ ಅಂದರೆ ತಮ್ಮ ತಾಲ್ಲೂಕಿನ ಕೊಡುಗೆ. ನಮ್ಮ ಪುಲೆನಾಡು ಆಸ್ಪತ್ರೆಗೆ ಡಾಕ್ಟರುಗಳನ್ನು ಹಾಕಬೇಕು. ಕನಿಷ್ಟ ಔಷಧಿಗಳನ್ನಾದರೂ ಕೊಟ್ಟರೆ ಜನರ ಜೀವನ ಉಳಿಸಬಹುದು. ಅವಕ್ಕೆ ಏನಾದರೂ ತಾವು ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಸತ್ತವರ ಸಂಬಂಧೀಕರಿಗೆ ಪರಿಹಾರವನ್ನು ಕೊಡುವುದಕ್ಕೆ ಮುಖ್ಯ ಮಂತ್ರಿಗಳ ಪರಿಹಾರ ನಿಧಿಯಿಂದ ಹಣವನ್ನು ಕೊಡಬೇಕು. ತೀರ್ಥಹಳ್ಳಿಗೆ ಇಲಾಖೆಯಿಂದ ಒಂದು ವಿಶೇಷವಾದ ಘಟಕವನ್ನು ಕೊಡತಕ್ಕ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀಮತಿ ಮನೋರಮಾ ಮಧ್ವರಾಜ್.—ನಾನು ವಿರೋಧ ಪಕ್ಷದ ನಾಯಕರು ಈಗ ತಾನೇ ಬಿಚ್ಚಿ ಮನಸ್ಸಿನಿಂದ ಗಾಢವಾದ ಅಳಲನ್ನು ತೋಡಿಕೊಂಡಿದ್ದಾರೆ. ಇದು ನಮ್ಮ ಮನಸ್ಸಿಗೆ

ವೇದ್ಯವಾಗಿದೆ. ಅಂಕಿ ಸಂಖ್ಯೆಗಳಲ್ಲಿ ಏನು ಹೆಚ್ಚು ಕಡಿಮೆ ಇದೆ, ಅದನ್ನು ಸರಿ ಮಾಡುತ್ತೇನೆ. ಅದರ ಬಗ್ಗೆ ಸರಿಯಾದ ವಿವರಣೆಯನ್ನು ಕೊಡಲಿಕ್ಕೆ ಪ್ರಯತ್ನ ಪಡುತ್ತೇನೆ. ಎರಡನೆಯದಾಗಿ, ವೈದ್ಯರುಗಳ ನೇಮಕಾತಿಯ ಬಗ್ಗೆ ಏನು ಹೇಳಿದ್ದಾರೆ, ಅದರ ಬಗ್ಗೆ ಈಗಾಗಲೇ ೮ ಜನ ವೈದ್ಯರುಗಳನ್ನು ಹಾಕಿದ್ದೇವೆಂದು ಹೇಳಿದ್ದೆ, ಈಗಾಗಲೇ ೪ ವೈದ್ಯರುಗಳನ್ನು ಹಾಕಿದ್ದೇವೆ. ೪ ವೈದ್ಯರಲ್ಲಿ ಒಬ್ಬರು ತೀರಿ ಹೋಗಿದ್ದಾರೆ, ೩ ಜನ ವೈದ್ಯರು ಡ್ಯೂಟಿ ರಿಪೋರ್ಟ್ ಮಾಡಿಕೊಂಡಿಲ್ಲ. ಅವರ ಮೇಲೆ ಡ್ಯೂಟಿ ರಿಪೋರ್ಟ್ ಮಾಡಿಕೊಳ್ಳುವಂತೆ ತಕ್ಷಣ ಕ್ರಮ ತೆಗೆದುಕೊಳ್ಳುತ್ತೇವೆ. ಬಾಕಿ ವೈದ್ಯರುಗಳನ್ನು ಆದಷ್ಟು ಜಾಗ್ರತೆ ಅಂದರೆ ೧೫ ದಿವಸಗಳೊಳಗಾಗಿ ವೈದ್ಯರುಗಳನ್ನು ಹಾಕುವಂತೆ ಪ್ರಯತ್ನ ಮಾಡುತ್ತೇವೆ.

ಶ್ರೀ ಡಿ. ಬಿ. ಚಂದ್ರೇಗೌಡ.— ವ್ಯಾಕ್ಸಿನ್ ಖಾಯಿಲೆ ಬಗ್ಗೆ...

ಶ್ರೀಮತಿ ಮನೋರಮಾ ಮಾಧ್ವರಾಜ್.— ಪ್ರಯೋಗದ ಹಂತದಲ್ಲಿದೆ. ಅರಣ್ಯ ಇಲಾಖೆಯವರೊಡನೆ ಸಮಾಲೋಚಿಸಬೇಕೆಂದು ಹೇಳಿದ್ದಾರೆ. ಅದರ ಬಗ್ಗೆ ನಮ್ಮ ಮುಖ್ಯ ಕಾರ್ಯದರ್ಶಿಯವರು ಹಾಗೂ ಆರೋಗ್ಯ ಇಲಾಖೆಯ ಅಧಿಕಾರಿಗಳ, ಪಶುಸಂಗೋಪನೆ ಇಲಾಖೆಯವರೊಡನೆ ಸಮಾಲೋಚನೆ ಮಾಡಿದ್ದಾರೆ. ಈ ವನ್ಯ ಪ್ರದೇಶವನ್ನು ಗ್ರಹಿಸುವ ಕಾರ್ಯಕ್ರಮ ಅಷ್ಟೊಂದು ಪ್ರಯೋಜನ ವ್ಯಾಪಕವಾಗಿಲ್ಲವೆಂಬ ಅಭಿಪ್ರಾಯ ಪಡೆಯಲಾಗಿದೆ. ಏನಿದ್ದರೂ ಪುನಃ ಈ ಬಗ್ಗೆ ವಿಚಾರ ವಿನಿಮಯ ಮಾಡಿ ಮಾನ್ಯ ಮುಖ್ಯ ಮಂತ್ರಿಗಳ ಕೂಡ ಸಮಾಲೋಚಿಸಿ, ಆ ಒಂದು ಕಾರ್ಯಕ್ರಮವನ್ನು ಮುಂದುವರಿಸಬೇಕೆಂದು ಕೇಳಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ೧೯೮೩ ರಿಂದ ಮುಖ್ಯ ಮಂತ್ರಿಗಳ ಪರಿಹಾರ ನಿಧಿಯಿಂದ ದಕ್ಷಿಣ ಕನ್ನಡ ಜಿಲ್ಲೆಯ ೨೩೪ ಕುಟುಂಬಗಳಿಗೆ ತಲಾ ೨,೦೦೦ ರೂಪಾಯಿಗಳಂತೆ ಒಟ್ಟು ೪,೬೮,೦೦೦ (ನಾಲ್ಕು ಲಕ್ಷ ೬೮ ಸಾವಿರ) ರೂಪಾಯಿಗಳನ್ನು ಪರಿಹಾರ ರೂಪದಲ್ಲಿ ಜಿಲ್ಲಾಧಿಕಾರಿಗಳ ಮೂಲಕ ಮುಖ್ಯ ಮಂತ್ರಿಗಳ ನಿಧಿಯಿಂದ ಕೊಡಲಾಗಿದೆ. ವರ್ಷವಾರು ವಿವರಗಳು ಈಗಿವೆ. ೧೯೮೨–೮೩ರಲ್ಲಿ ೬೧ ಕುಟುಂಬಗಳಿಗೆ ಕೊಡಲಾಗಿದೆ. ೧೯೮೩–೮೪ ರಲ್ಲಿ ೧೫೬ ಕುಟುಂಬಗಳಿಗೆ ಕೊಡಲಾಗಿದೆ, ೧೯೮೪–೮೫ ರಲ್ಲಿ ೧೭ ಕುಟುಂಬಗಳಿಗೆ ಕೊಡಲಾಗಿದೆ. ಮತ್ತು ಉತ್ತರ ಕನ್ನಡ ಜಿಲ್ಲೆಯ ೫೫ ಕುಟುಂಬಗಳಿಗೆ ತಲಾ ೨,೦೦೦ ರೂಪಾಯಿಯಂತೆ ಒಟ್ಟು ೧,೧೦,೦೦೦ (ಒಂದು ಲಕ್ಷ ಹತ್ತು ಸಾವಿರ) ರೂಪಾಯಿಗಳನ್ನು ಪರಿಹಾರ ರೂಪದಲ್ಲಿ ಜಿಲ್ಲಾಧಿಕಾರಿಗಳ ಮೂಲಕ ಮುಖ್ಯ ಮಂತ್ರಿಗಳ ನಿಧಿಯಿಂದ ಕೊಡಲಾಗಿದೆ ೧೯೮೨–೮೩ ರಲ್ಲಿ ೧೦ ಕುಟುಂಬಗಳಿಗೆ ಕೊಡಲಾಗಿದೆ ೧೯೮೩–೮೪ ರಲ್ಲಿ ೩೬ ಕುಟುಂಬಗಳಿಗೆ ಕೊಡಲಾಗಿದೆ. ೧೯೮೪–೮೫ ರಲ್ಲಿ ೯ ಕುಟುಂಬಗಳಿಗೆ ಕೊಡಲಾಗಿದೆ ನಾನು ಉತ್ತರಿಸುತ್ತಾ ಹೇಳಿದ್ದೇನೆ. ಸರ್ಕಾರದಿಂದ ಕೊಡಲಿಕ್ಕೆ ಆಗುವುದಿಲ್ಲ. ಮುಖ್ಯ ಮಂತ್ರಿಗಳ ಪರಿಹಾರ ನಿಧಿಯಿಂದ ಶೀಘ್ರ ಕೊಡಿಸುವಂತೆ ಪ್ರಯತ್ನ ಪಡುತ್ತೇವೆ.

ಶ್ರೀ ಎಸ್. ಬಂಗಾರಪ್ಪ.— ಗಮನಸೆಳೆಯುವ ಸೂಚನೆಗೆ ಇರತಕ್ಕ ನಿಯಮಾವಳಿಯ ಪ್ರಕಾರ ಭಾಗವಹಿಸುವುದಕ್ಕೆ ಆಗುವುದಿಲ್ಲ ಎಂದುದರಿಂದ ತಮ್ಮ ಅಪ್ಪಣೆ ಪಡೆದು ಹೇಳುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಈ ರೋಗ ಹುಟ್ಟಿದ್ದು ನಮ್ಮ ತಾಲ್ಲೂಕಿನಿಂದ, ಅದನ್ನು ಬೆಳೆಸಿದವರು ನಿಮ್ಮ ತಾಲ್ಲೂಕಿನವರು. ಕ್ಯಾಸನೂರು ಎನ್ನುವುದು ಅರಣ್ಯ ಇರುವ ಒಂದು ಊರು. ಅಲ್ಲಿ ೧೯೫೬ ರಲ್ಲಿ ಈ ಖಾಯಿಲೆ ಶುರುವಾಯಿತು. It is a viral disease.

ಈ ಖಾಯಿಲೆ ಬಂದಾಗ ವಿಪರೀತ ಜ್ವರ ಬರುತ್ತೆ, ಮೂಗಿನಲ್ಲಿ ರಕ್ತ ಬರುತ್ತೆ, ನಾರ್ಮಲ್ ಔಷಧಿಗೆ ಕಂಟ್ರೋಲ್ ಆಗುವುದಿಲ್ಲ. ಇದರಿಂದ ಸೊರಬ, ಸಾಗರ, ಹೊಸನಗರ ತಾಲ್ಲೂಕಿನಲ್ಲಿ ಬಹಳ ಜನ ಸತ್ತು ಹೋಗಿದ್ದಾರೆ. ಶಿವಮೊಗ್ಗ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಕೂಡ ಈ ರೋಗ ಕಾಣಿಸಿಕೊಂಡಿದೆ. ಹೊನ್ನಾವರ ಸಿರಸಿ ಹಾಗೂ ಸಿದ್ದಾಪುರ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನಲ್ಲಿ ಕೂಡ ಈ ರೋಗ ಹರಡಿದ್ದು ಸಿಕ್ಕಾಪಟ್ಟೆ ಜನ ಸತ್ತು ಹೋಗಿದ್ದಾರೆ. ಆ ಕಾಲದಲ್ಲಿ ಈ ರೋಗ ಕಾಣಿಸಿಕೊಂಡಾಗ ಆಸ್ಪತ್ರೆಗಳಲ್ಲಿ ಪ್ರತ್ಯೇಕ ವಾರ್ಡ್‌ಗಳನ್ನು ಮಾಡಿದ್ದರು. ಕೆ.ಎಫ್.ಡಿ. ವಾರ್ಡ್‌ಗೋಸ್ಕರ ಬಜೆಟ್‌ನಲ್ಲಿ ಪ್ರಾವಿಷನ್ ಮಾಡುತ್ತಿದ್ದರು, ಆದರೆ, ಇತ್ತೀಚೆಗೆ ಈ ಒಂದು ಪ್ರಾವಿಷನ್ ಬಜೆಟ್‌ನಲ್ಲಿ ಇಡುವುದನ್ನು ನಿಲ್ಲಿಸಿದ್ದಾರೆ. ಹಳೇ ಕಟ್ಟಡಗಳು ಇವೆ, ಹೊಸ ಕಟ್ಟಡಗಳನ್ನು ಕಟ್ಟಿಸಿಲ್ಲ. ಈ ಕಾಯಿಲೆ ಯಾವ ಯಾವ ತಾಲ್ಲೂಕುಗಳಲ್ಲಿ ಕಾಣಿಸಿಕೊಂಡಿದೆ, ಅಂತಹ ಕಡೆಗಳಲ್ಲಿ ಪ್ರತ್ಯೇಕವಾಗಿ ವಾರ್ಡ್‌ಗಳನ್ನು ಕಟ್ಟಿಸಿಕೊಡುವುದಕ್ಕೆ ಬಜೆಟ್‌ನಲ್ಲಿ ಸ್ಪೆಷಲ್ ಪ್ರಾವಿಷನ್ ಮಾಡಬೇಕೆಂದು ಹೇಳುತ್ತೇನೆ. ನಾನು ಮೊದಲನೇ ಸಾರಿ ಶಾಸಕನಾಗಿ ಬಂದಾಗ, ನನ್ನ ತಾಲ್ಲೂಕಿನಲ್ಲಿ ಈ ಒಂದು ರೋಗದಿಂದ ಜನ ಸತ್ತಾಗ, ಈ ವಿಚಾರ ಪ್ರಸ್ತಾಪವಾಗಿತ್ತು. ಕೆ.ಎಫ್.ಡಿ. ವಾರ್ಡ್‌ಗೋಸ್ಕರವೇ ಹೆಚ್ಚಿಗೆ ಹಣವನ್ನು ಇಟ್ಟು, ವೈದ್ಯರುಗಳನ್ನು ತುರ್ತಾಗಿ ಕಳುಹಿಸಿಕೊಡುವಂಥ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ.—ಈ ಕಾಯಿಲೆ ಬಂದಿರುವುದು ತೀರ್ಥಹಳ್ಳಿಯಲ್ಲಿ.

ಶ್ರೀ ಆರ್.ಎನ್. ನಾಯಕ್.—ಈ ಕಾಯಿಲೆಯಿಂದ ಹೊನ್ನಾವರದಲ್ಲಿ ೨೦ ಜನಗಳ ಮೇಲೆ ಸತ್ತು ಹೋಗಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ರಿಪೋರ್ಟ್‌ನಲ್ಲಿ ತೀರ್ಥಹಳ್ಳಿ ಎಂದು ಕೇಳಿದ್ದೀರಾ. ಬೇರೆ ಬೇರೆ ಕಡೆ ಕೂಡ ಈ ರೋಗ ಇರುವುದರಿಂದ ಮಾನ್ಯ ಸಚಿವರು ಈ ವಿಚಾರವನ್ನು ಗಮನದಲ್ಲಿಟ್ಟುಕೊಂಡು ವೈದ್ಯರುಗಳನ್ನು ತುರ್ತಾಗಿ ಕಳುಹಿಸಿಕೊಡಬೇಕು. ಒಂದು ಸಾರಿ ಈ ರೋಗ ಕಾಣಿಸಿಕೊಂಡರೆ, ನೂರಾರು ಜನರಿಗೆ ಬರುತ್ತದೆ. ೧೫ ದಿವಸದಲ್ಲಿ ವೈದ್ಯರುಗಳನ್ನು ಕಳುಹಿಸಿಕೊಡುತ್ತೇವೆಂದು ಹೇಳಿದ್ದೀರಿ. ಸಂತೋಷ. ನಿಮ್ಮ ಕಾಲದಲ್ಲಿ ಈ ರೋಗ ಜಾಸ್ತಿ ಆಗದೇ ಇರಲಿ ಎನ್ನುವುದೇ ನಮ್ಮ ಆಸೆ.

ಶ್ರೀಮತಿ ಮನೋರಮಾ ಮಾಧ್ವರಾಜ್.—ಮಂಗನ ಕಾಯಿಲೆ ಬಗ್ಗೆ ಪ್ರತ್ಯೇಕವಾದ ವಾರ್ಡ್‌ಗಳನ್ನು ಕೇಳಿದ್ದಾರೆ. ಈ ವಿಚಾರದಲ್ಲಿ ಮಾನ್ಯ ಆರ್ಥ ಸಚಿವರ ಜೊತೆ ಸಮಾಲೋಚನೆ ಮಾಡಿ ತೀರ್ಮಾನಕ್ಕೆ ಬರುತ್ತೇನೆ. ಇದು ಎಲ್ಲರೂ ಕಳವಳ ಪಡತಕ್ಕ ವಿಚಾರವಾಗಿರುವುದರಿಂದ ವೈದ್ಯರುಗಳನ್ನು ೧೫ ದಿವಸಗಳೊಳಗೆ ಕಳುಹಿಸಿಕೊಡುತ್ತೇನೆ. ಶಿವಮೊಗ್ಗ ಜಲ್ಲೆಯಲ್ಲಿ ೨೯ ವೈದ್ಯರುಗಳ ಹುದ್ದೆಗಳು ಖಾಲಿ ಇದ್ದು ಸಾಮಾನ್ಯ ಪರ್ಗಾವಣೆ ಸಂದರ್ಭದಲ್ಲಿ ಎಷ್ಟು ಬೇಕೋ ಅಷ್ಟನ್ನು ತುಂಬುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ.—ಉತ್ತರ ಕನ್ನಡ ಜಿಲ್ಲೆಯನ್ನು ಮರೆಯಬೇಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಮಾನ್ಯ ಆರೋಗ್ಯ ಸಚಿವರು ಮಾತನಾಡುತ್ತಾ...

ಶ್ರೀ ಎಂ. ವೀರಪ್ಪಮೊಯ್ಲಿ.—ನಾನು ಅವರು ಮಾತನಾಡುವುದಕ್ಕೆ ಅಡ್ಡಿ ಬರುವುದಿಲ್ಲ. ಗಮನ ಸೆಳೆಯುವ ಸೂಚನೆ ಬಗ್ಗೆ.....

ಶ್ರೀ ಪಿ.ಜಿ.ಆರ್. ಸಿಂಧ್ಯ.—ಆ ಕಡೆ ಸದಸ್ಯರು ಮಾತನಾಡುವಾಗ ಅಬ್ಜೆಕ್ಷನ್ ಮಾಡಲಿಲ್ಲ. ನಾವು ಮಾತನಾಡುವಾಗ ಏತಕ್ಕೆ ಅಬ್ಜೆಕ್ಷನ್ ಮಾಡುತ್ತೀರಿ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ.—ಹಾಗಾದರೆ ಬೇಡ ಬಿಡಿ.

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಶಾಸಕರಾದ ಸಿಂಧ್ಯ ಅವರು ಹಿರಿಯ ಸದಸ್ಯರು. ಅವರೂ ಸಹ ಆರೋಗ್ಯ ಸಚಿವರಾಗಿದ್ದರು. ಅವರ ಸೂಚನೆ ಸಲಹೆಗಳು ನಮಗೆ ಬೇಕು. ಅವರು ಎದ್ದು ನಿಂತು ಕೇಳಿದಾಗ ನಾನು ಈ ತರಹ ಹೇಳುತ್ತಿಲ್ಲ. ಪ್ರಶ್ನೆ ಮೂಲ ಭೂತವಾಗಿ ಏನಾಗಿದೆಯೆಂದರೆ, ಗಮನ ಸೆಳೆಯುವ ಸೂಚನೆ ಒಂದೂವರೆ ಗಂಟೆ ಕಾಲ ನಡೆಯಿತು. ಯಾರಾದರೂ ನೋಡುವವರು ಇದೇನು ನಿಯಮ ಇದೆಯೋ ಇಲ್ಲವೊ ಎಂದು ಕೇಳಿದರೆ, ನಾವು ಏನು ಹೇಳಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಅಧ್ಯಕ್ಷರೆ, ಈ ಸದನದಲ್ಲಿ ಎಲ್ಲಾ ಸಂಪ್ರದಾಯಗಳನ್ನು ಹಾಕಿಕೊಂಡು ಬಂದಿದ್ದಾರೆ. ಕಾಲಿಂಗ್ ಅಟೆನ್‌ಷನ್‌ನಲ್ಲಿ ಯಾರೂ ಮಾತನಾಡುವುದು ಬೇಡ ಅಂದರೆ ನಾನೂ ಮಾತನಾಡುವುದಿಲ್ಲ. ನೀವೇ ಮಾತನಾಡಿಕೊಂಡು ನಡೆಸಿಕೊಂಡು ಹೋಗಿ. ಮಾನ್ಯ ಸದಸ್ಯರಾದ ಬಂಗಾರಪ್ಪನವರು ಮಾತನಾಡುವಾಗ ತಾವು ಮಾತನಾಡುವುದಿಲ್ಲ. ನಾನು ಎದ್ದು ನಿಂತಾಗ ನೀವು ನಿಯಮವನ್ನು ಹೇಳುತ್ತಿದ್ದೀರಿ. ಇದರ ಬಗ್ಗೆ ಬಹಳಷ್ಟು ವಿಷಯಗಳನ್ನು ಹೇಳುವುದು ಇದೆ.

ಶ್ರೀ ಆರ್.ವಿ. ದೇಶಪಾಂಡೆ.—ಮಾನ್ಯ ಬಂಗಾರಪ್ಪನವರಿಗೆ ಫ್ರೀ ಲೈಸೆನ್ಸ್ ಏನು.

ಶ್ರೀ ಎಂ. ವೀರಪ್ಪಮೊಯಿಲಿ.—ಈಗ ಎರಡು ವಿಚಾರ ಇಲ್ಲಿ ನಡೆಯುತ್ತಿದೆ. ನಾನು ಆಕ್ಷೇಪಣೆಗೆ ಹೇಳುತ್ತಿಲ್ಲ. ಈ ಸದನದ ಕಾನೂನು ಚೌಕಟ್ಟು ಯಾರು ಮಾಡಿದ್ದು. ಕಾಲಿಂಗ್ ಅಟೆನ್‌ಷನ್‌ನಲ್ಲಿ ಉದ್ದಕ್ಕೂ ಮಾತನಾಡಿಕೊಂಡು ಹೋಗಬಹುದಾದರೆ ಅದಕ್ಕೆ ಏನು ಹೇಳಬೇಕು. ಈಗ ಮಾನ್ಯ ಬಂಗಾರಪ್ಪನವರಿಗೆ ಅವಕಾಶ ಕೊಟ್ಟಿದ್ದೀರಿ, ಮಾನ್ಯ ಸಿಂಧ್ಯ ಅವರಿಗೆ ಅವಕಾಶ ಕೊಡಿ, ಆದರೆ ಪ್ರಶ್ನೆ ಏನು ಅಂದರೆ, ನಾನು ಮುಂದೆ ಕಾಲ್ ಅಟೆನ್‌ಷನ್ ಪ್ರಶ್ನೆ ಬಂದಾಗ ಮುಂದೆ ಈ ರೀತಿ ಆಸ್ಪದ ಮಾಡುವುದು ಬೇಡ. ನಾನು ರೆಟ್ರಾಸ್‌ಪೆಕ್ಟೀವ್ ಎಂದು ಈಗ ಹೇಳುತ್ತಿಲ್ಲ, ಈಗ ಅವರಿಗೆ ಅವಕಾಶ ಮಾಡಿಕೊಡಿ. ಮತ್ತೊಂದು ವಿಚಾರ ಏನು ನಡೆದಿದೆ ಬೆಳಿಗ್ಗೆಯಿಂದ ನಾವು ಏನು ನೋಡುತ್ತಿದ್ದೇವೆ ಎಂದರೆ ಸನ್ಮಾನ್ಯ ಮುಖ್ಯಮಂತ್ರಿಗಳು ಎದ್ದು ನಿಂತಾಗಲೂ ಎಷ್ಟರೂ ಎದ್ದು ನಿಲ್ಲುತ್ತಾರೆ, ಈಗ ನಾನು ಎದ್ದು ನಿಂತಾಗಲೂ ಎಲ್ಲರೂ ಎದ್ದು ನಿಲ್ಲುತ್ತಾರೆ. ಆದ್ದರಿಂದ, ನಿಯಮವನ್ನು ಎಲ್ಲರೂ ಪಾಲಿಸ

ಬೇಕಾಗುತ್ತದೆ. ನನ್ನ ಬದಿಯಲ್ಲಿ ಮಾಜಿ ಸಭಾಪತಿಯವರು ನನಗೆ ಸಂಸದೀಯ ಸಚಿವರಾಗಿ ಏನು ಮಾಡುತ್ತಿದ್ದೀರಿ, ಸದನದಲ್ಲಿ ನಿಯಮದ ಪ್ರಕಾರ ನಡೆಯುತ್ತಿದೆಯೇ ಎಂದು ಅಭಿಪ್ರಾಯ ವ್ಯಕ್ತ ಪಡಿಸಿದ್ದರಿಂದ, ತಮ್ಮೆಲ್ಲರ ಗಮನಕ್ಕೆ ತರಬೇಕಾಯಿತು. ಅದು ಸೆಲ್ಫ್ ಡಿಸಿಪ್ಲಿನ್, ನಮ್ಮ ನಮ್ಮಲ್ಲಿಯೇ ನಿಯಮವನ್ನು ಅನುಸರಿಸುವುದಕ್ಕೆ ಪ್ರಯತ್ನ ಮಾಡೋಣ. ಹಿಂದೆಯೂ ಕೂಡ ಕಾಲ್ ಅಟೆಂಷನ್ ಮೇಲೆ ಸಮಯ ವಿಸ್ತಾರ ಮಾಡಿದ್ದು ಇದೆ. ಆದರೆ ಇದೇ ರೀತಿ ಮುಂದುವರೆಯಬಾರದು. ಈಗ ಮಾನ್ಯ ಸಿಂಧ್ಯಾ ಅವರಿಗೆ ಅವಕಾಶ ಕೊಟ್ಟಿದ್ದೀರಿ, ಅವರು ಈಗ ತಮ್ಮ ಸಲಹೆಗಳನ್ನು ಹೇಳಲಿ.

ಶ್ರೀ ಪಿ ಜಿ.ಆರ್. ಸಿಂಧ್ಯ,—ಅಧ್ಯಕ್ಷರೆ, ನಾವು ಏತಕ್ಕೆ ಎದ್ದುನಿಂತುಕೊಂಡೆವು ? ಇವೊತ್ತು ಸಂಸದೀಯ ವ್ಯವಹಾರಗಳ ಸಚಿವರಿಗೆ ಇರುವಷ್ಟು ಅನುಭವ ನನಗೆ ಇಲ್ಲ. ಅವರಿಂದ ಕಲಿಯುವುದು ಬಹಳ ಇದೆ. ನಾನು ಒಪ್ಪುತ್ತೇನೆ. ಆದರೆ ಅವರು ಈ ಕಡೆ ಕುಳಿತುಕೊಂಡಿದ್ದಾಗ ಇದನ್ನು ಪರಿವಾಲನೆ ಮಾಡಲಿಲ್ಲ. ದಯಮಾಡಿ ತಾವು ಕೇಳಬೇಕು. ಏಕೆಂದರೆ, ಮಾನ್ಯ ಆರೋಗ್ಯ ಸಚಿವರು ನನಗೆ ನೆನ್ನೆಯ ದಿವಸ ಉತ್ತರವನ್ನು ಕೊಟ್ಟಿದ್ದಾರೆ, ಆದರೆ ಆರೋಗ್ಯ ಇಲಾಖೆಯಿಂದ ಬಂದಂಥ ಉತ್ತರ ಅವರು ಕೊಟ್ಟಿರುವುದು ಸರಿಯಲ್ಲ. ಅದನ್ನು ನಾನು ಮೂವ್ ಮಾಡಬಹುದಾಗಿತ್ತು. ಅದನ್ನು ಮಾಡಲಿಕ್ಕೆ ಹೋಗಲಿಲ್ಲ. ಅವರು ಮಂತ್ರಿಗಳಾಗಿ ಮೂರು ತಿಂಗಳು ಆಗಿದೆ. ಅಧಿಕಾರಿಗಳು ಹೇಳತಕ್ಕ ವಿಚಾರದಲ್ಲಿ ಅವರು ವಿಮರ್ಶೆ ಮಾಡತಕ್ಕದ್ದು ಒಳ್ಳೆಯದು ಅಲ್ಲಿ ಇದ್ದಾಗ ಜವಾಬ್ದಾರಿ ಸ್ಥಾನದಿಂದ ಹೇಳಬೇಕಾಗುತ್ತದೆ. ಆರೋಗ್ಯ ಇಲಾಖೆಯ ಕಾರ್ಯದರ್ಶಿಯವರು ಸೈನ್ ಮಾಡಿರುತ್ತಾರೆ. ಅದು ಕೆಳಮಟ್ಟದಿಂದ ಬಂದಿರುವುದಿಲ್ಲ. ಅದನ್ನು ಓದಬೇಕಾಗುತ್ತದೆ ಇದು ಮಹತ್ವವಾದಂಥ ವಿಚಾರ ಇದೆ. ಮಂಗನಕಾಯಿಲೆ ೧೯೫೬ನೇ ಇಸವಿಯಲ್ಲಿ ಪತ್ತೆ ಆಗಿದ್ದು. ಇದೇ ಉತ್ತರವನ್ನು ನನ್ನ ಕೈಯಲ್ಲೂ ಓದಿಸಿದ್ದಾರೆ. ನಾನು ಆರೋಗ್ಯ ಇಲಾಖೆಯ ಮಂತ್ರಿಯಾಗಿದ್ದಾಗ ನನ್ನ ಕೈಯಲ್ಲೂ ಇದೇ ಉತ್ತರವನ್ನು ಓದಿಸಿದ್ದಾರೆ. ಇದು ಬೆಳ್ತಂಗಡಿಯಲ್ಲಿ ಪ್ರಾರಂಭವಾದಾಗ ತಕ್ಷಣ ನಾನು ಅಲ್ಲಿಗೆ ಹೋಗಿ ಎರಡು ದಿವಸ ಇದ್ದು ಮಾನ್ಯ ವೀರೇಂದ್ರಹೆಗಡೆಯವರ ಹತ್ತಿರವೂ ಸಹ ಮಾತನಾಡಿ, ಅಲ್ಲಿಗೆ ಔಷಧಿಯನ್ನು ಕೊಟ್ಟಿದ್ದೆವು. ಮಾನ್ಯ ಮುಖ್ಯ ಮಂತ್ರಿಗಳವರ ಪರಿಹಾರ ಧನದಿಂದ ದುಡ್ಡು ಕೊಡಿಸುವುದಕ್ಕೆ ಹೇಳಿದ್ದೇನೆ. ಆದರೆ, ಇದರಿಂದ ಏನೂ ಪ್ರಯೋಜನ ಆಗುವುದಿಲ್ಲ. ಈ ಸಂದರ್ಭದಲ್ಲಿ ಮಾನ್ಯ ಸಚಿವರು ಮತ್ತು ಸರ್ಕಾರದ ಗಮನಕ್ಕೆ ತರುವುದು ಏನೆಂದರೆ, ಈ ವ್ಯಾಕ್ಸಿನ್ ಫೇಲ್ಯೂರ್ ಆಗಿದೆ ಎಂದು ಹೇಳಿದ್ದಾರೆ, ಎಲ್ಲಿ ಫೇಲ್ಯೂರ್ ಆಗಿದೆ, ಎಷ್ಟು ಜನರಲ್ಲಿ ಫೇಲೂರ್ ಆಗಿದೆ. ಹೋದ ಜೂನ್‌ನಲ್ಲಿ ಇದರ ಬಗ್ಗೆ ಒಂದು ಪ್ರಶ್ನೆ ಬಂದಿದೆ ಆ ಫೈಲನ್ನು ತೆಗೆಯಿರಿ, ಮತ್ತೆ ಅವನ್ನೇ ಕೊಟ್ಟಿದ್ದಾರೆ. ಐಸಿಎಂಆರ್‌ನಲ್ಲಿ ರೀಸರ್ಚ್ ಆಗಿರತಕ್ಕಂಥಾದ್ದು ಏನು, ನಿಮ್ಮ ಸರಕಾರ ಇದಕ್ಕೆ ಎಷ್ಟು ಹಣ ಕೊಡಬೇಕು ಎಂಬುದನ್ನು ವಿಚಾರ ಮಾಡಬೇಕಾಗುತ್ತದೆ. ಮಂತ್ರಿಗಳು ದೆಹಲಿಗೆ ಹೋಗಿದ್ದಾಗ ಇದರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಅಧಿಕಾರಿಗಳು ಅವರಿಗೆ ಹೇಳಿರಲಿಕ್ಕೆ ಸಾಧ್ಯವಿಲ್ಲ. ಬೆಳಗಾಂನ ಇನ್‌ಸ್ಟಿಟ್ಯೂಟ್‌ನಲ್ಲಿ ಮಾಡಬೇಕೆಂದು ಹೇಳಿದರು. ಶಿವಮೊಗ್ಗದಲ್ಲಿ ಇನ್‌ಸ್ಟಿಟ್ಯೂಟ್ ಗೋಸ್ಕರ ೧೦-೧೫ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೆವು ಅದು. ಕೂಡ ಫೇಲ್ಯೂರ್ ಆಗಿದೆ. ಮತ್ತೆ ಇಲಿಗಳ ಮೇಲೆ ಪ್ರಯೋಗ ಮಾಡುತ್ತಿದ್ದಾರೆಯೇ ಇಲ್ಲವೇ ಎಂಬುದು ಗೊತ್ತಿಲ್ಲ ಯಾವುದೋ ಒಂದು ದೇಶದಲ್ಲಿ ಬಹುಶ: ಫ್ರಾನ್ಸ್ ಇರಬಹುದೆಂದು ಕಾಣುತ್ತದೆ. ಆ ದೇಶದಲ್ಲಿ ಇದಕ್ಕೆ ಸಂಬಂಧಪಟ್ಟ ವ್ಯಾಕ್ಸಿನ್ ಅನ್ನು ಕಂಡುಹಿಡಿದಿದ್ದಾರೆ, ಅದು ಶೇಕಡ ೮೦ ರಷ್ಟು ಸಕ್ಸಸ್ ಆಗಿರತಕ್ಕಂಥಾದ್ದು ಇದೆ. ಅದನ್ನು ಏಕೆ ಅಲ್ಲಿಂದ ಇಲ್ಲಿಗೆ ತರಿಸಿಕೊಳ್ಳುವುದಕ್ಕೆ ಆಗಿಲ್ಲ ಇವರ ಬಗ್ಗೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳ ಜೊತೆಯಲ್ಲಿ ಕುಳಿತು ದೀರ್ಘವಾಗಿ ಕೂಲಂಕಷವಾಗಿ ವಿಚಾರ ಮಾಡಿ ಅವರು ಕೊಡತಕ್ಕಂತಹ ಅಂಕಿಅಂಶಗಳನ್ನು ತೆಗೆದುಕೊಂಡು ಅಧಿವೇಶನ ಮುಗಿಯಿತು ಮುಂದಿನ ವರ್ಷ ನೋಡಿಕೊಳ್ಳೋಣ ಎಂದು ಹೇಳಬೇಡಿ. ಕೇಂದ್ರ ಸರಕಾರದ ಜೊತೆಯಲ್ಲಿ ಸಮಾಲೋಚನೆ ಮಾಡಿ ಐಸಿಎಂಆರ್‌ನಲ್ಲಿ ಏನು ರಿಸರ್ಚ್ ಆಗಿದೆ, ಇಲ್ಲಿ ಏನು ಟ್ರಯಲ್ ನಡೆಯುತ್ತಿದೆ. ಎಷ್ಟು ಜನರ ಮೇಲೆ ಟ್ರಯಲ್ ಮಾಡಿದ್ದಾರೆ ಎಂಬುದನ್ನು ವಿಚಾರ ಮಾಡಿ. ಇದಕ್ಕೋಸ್ಕರ ಜರಟಿ ನಿರ್ದೇಶಕರನ್ನು ಏನು ಅಪಾಯಿಂಟ್ ಮಾಡಿದ್ದೀರಿ ಅವರನ್ನು ಕರೆಸಿಕೊಂಡು ವಿಚಾರ ಮಾಡಿ. ಸೀರಿಯಸ್ ಆಗಿ ವಿಚಾರ ಮಾಡಿ ಮುಖ್ಯವಾಗಿ ಪ್ರಿವೆನ್‌ಷನ್ ಬಗ್ಗೆ ಗಮನ ಕೊಡಬೇಕು.

ಶ್ರೀಮತಿ ನುನೋರಮಾ ಮಾಧ್ವರಾಜ್.—ಮಾನ್ಯ ಸದಸ್ಯರು ಹಿಂದೆ ಆರೋಗ್ಯ ಸಚಿವರಾಗಿದ್ದು ಕೊಂಡು ತಮ್ಮ ಹಿಂದಿನ ಅನುಭವದ ಹಿನ್ನೆಲೆಯಲ್ಲಿ ಏನು ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ ಅದನ್ನು ಗಮನದಲ್ಲಿಟ್ಟುಕೊಂಡು ಖಂಡಿತವಾಗಿಯೂ ಸಂಬಂಧಪಟ್ಟ ಅಧಿಕಾರಿಗಳ ಜೊತೆಯಲ್ಲಿ ವಿಚಾರ ವಿನಿಮಯ ಮಾಡಿ ಸೂಕ್ತ ಕ್ರಮ ಕೈಗೊಳ್ಳುತ್ತೇನೆಂಬ ಆಶ್ವಾಸನೆಯನ್ನು ಕೊಡುತ್ತೇನೆ.